# ಕರ್ನಾಟಕ ಗ್ಯಾಸೆಟೀಯರ್ ಇಲಾಖೆ

## 2022-23 ನೇ ಸಾಲಿನ ವಾರ್ಷಿಕ ವರದಿ

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಕಟಿಸಿದ್ದ ಜಿಲ್ಲಾ/ತಾಲ್ಲೂಕು ಗ್ಯಾಸೆಟೀಯರ್‌ಗಳನ್ನು ಪರಿಷ್ಕರಿಸುವ ದೃಷ್ಟಿಯಿಂದ ಮತ್ತು ಸ್ವಾತಂತ್ರ್ಯಾನಂತರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಕ್ರೋಢೀಕರಿಸಿ ಜಿಲ್ಲಾ ಗ್ಯಾಸೆಟೀಯರ್‌ಗಳನ್ನು ಪ್ರಕಟಿಸುವ ಉದ್ದೇಶದಿಂದ ಕರ್ನಾಟಕ ಗ್ಯಾಸೆಟೀಯರ್ ಇಲಾಖೆಯನ್ನು 1958ರಲ್ಲಿ ಸ್ಥಾಪಿಸಲಾಯಿತು. ಆರಂಭದಲ್ಲಿ ಸಾಮಾನ್ಯ ಪರಿವಿಡಿಯ ಜೊತೆಗೆ ಅಭಿವೃದ್ಧಿ ಹಾಗೂ ಪ್ರಗತಿ ಸೌಲಭ್ಯಗಳನ್ನು ವಿಸ್ತಾರವಾಗಿ ಸೇರ್ಪಡೆ ಮಾಡುವ ದೃಷ್ಟಿಯಿಂದ ಕೇಂದ್ರ ಗ್ಯಾಸೆಟೀಯರ್ ಘಟಕವು ಕೆಲವು ಮಾರ್ಗದರ್ಶನಗಳನ್ನು ರೂಪಿಸಿತ್ತು. ಅದರಂತೆ ಮರುವಿನ್ಯಾಸಗೊಳಿಸಿ ಕೇಂದ್ರ ಸರ್ಕಾರದ ನೀತಿಯಂತೆ 1990 ರವರೆಗೆ ಆಗ ಅಸ್ತಿತ್ವದಲ್ಲಿದ್ದ 20 ಜಿಲ್ಲೆಗಳ ಜಿಲ್ಲಾ ಗ್ಯಾಸೆಟೀಯರ್‌ಗಳನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಗಿದೆ. ನಂತರ ಕರ್ನಾಟಕ ಗ್ಯಾಸೆಟೀಯರ್ ಇಲಾಖೆಯು ಜಿಲ್ಲಾ ಗ್ಯಾಸೆಟೀಯರ್‌ಗಳ ಪರಿಷ್ಕೃತ ಆವೃತ್ತಿಗಳನ್ನು ಕನ್ನಡದಲ್ಲಿ ಪ್ರಕಟಿಸಲು ಪ್ರಾರಂಭಿಸಿ ಇದುವರೆಗೆ ಈ ಮಾಲಿಕೆಯಲ್ಲಿ ರಾಜ್ಯದ ಆಡಳಿತ ಭಾಷೆಗೆ ಅನುಗುಣವಾಗಿ ಕೊಡಗು, ಧಾರವಾಡ, ಕಲಬುರಗಿ, ವಿಜಯಪುರ, ಮಂಡ್ಯ, ಕೋಲಾರ, ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರ ಹಾಗೂ ತುಮಕೂರು ಒಟ್ಟು 10 ಜಿಲ್ಲೆಗಳ ಜಿಲ್ಲಾ ಗ್ಯಾಸೆಟೀಯರ್‌ಗಳನ್ನು ಕನ್ನಡದಲ್ಲಿ ಪ್ರಕಟಿಸಿದೆ. ಜಿಲ್ಲಾ ಗ್ಯಾಸೆಟೀಯರ್‌ಗಳನ್ನು ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿ ಪ್ರಕಟಿಸುವ ಕಾರ್ಯಕ್ರಮದಡಿ ಈವರೆಗೆ ಕೊಡಗು, ಧಾರವಾಡ, ಗುಲ್ಬರ್ಗಾ, ಬಿಜಾಪುರ, ಮಂಡ್ಯ, ಕೋಲಾರ, ದಕ್ಷಿಣ ಕನ್ನಡ, ಹಾಗೂ ಉಡುಪಿ ಜಿಲ್ಲಾ ಗ್ಯಾಸೆಟೀಯರ್‌ಗಳನ್ನು ಪ್ರಕಟಿಸಿದೆ. ಬೀದರ್ ಜಿಲ್ಲಾ ಗ್ಯಾಸೆಟೀಯರ್ ನ್ನು ಆಂಗ್ಲ ಭಾಷೆಯಲ್ಲಿ 2019ರಲ್ಲಿ ಪ್ರಕಟಿಸಿದೆ.

**ಇಲಾಖೆಯು ತಾಲ್ಲೂಕು ಗ್ಯಾಸೆಟೀಯರ್ ಪ್ರಕಟಣೆ ಯೋಜನೆಯಡಿ ಈ ಕೆಳಕಂಡ ಜಿಲ್ಲೆಗಳಲ್ಲಿನ ತಾಲ್ಲೂಕು ಗ್ಯಾಸೆಟೀಯರ್‌ಗಳನ್ನು ಪ್ರಕಟಿಸಿದೆ.**

**೧)ಮೈಸೂರು ಜಿಲ್ಲೆಯಲ್ಲಿನ ತಾಲ್ಲೂಕು ಗ್ಯಾಸೆಟೀಯರ್ ಗಳು**

1)ಕೃಷ್ಣರಾಜನಗರ, 2)ಪಿರಿಯಾಪಟ್ಟಣ, 3)ಹುಣಸೂರು, 4)ಮೈಸೂರು, 5)ನಂಜನಗೂಡು, 6)ಹೆಗ್ಗಡದೇವನಕೋಟೆ ಹಾಗೂ 7)ಟಿ ನರಸಿಪೂರ.

**೨)ದಾವಣಗೆರೆ ಜಿಲ್ಲೆ ಯಲ್ಲಿನ ತಾಲ್ಲೂಕು ಗ್ಯಾಸೆಟೀಯರ್ ಗಳು**

1)ದಾವಣಗೆರೆ, 2)ಹರಿಹರ ಹಾಗೂ3) ಹರಪನಹಳ್ಳಿ

**೩)ಚಿತ್ರದುರ್ಗ ಜಿಲ್ಲೆ ಯಲ್ಲಿನ ತಾಲ್ಲೂಕು ಗ್ಯಾಸೆಟೀಯರ್ ಗಳು**

1)ಹಿರಿಯೂರು, 2)ಹೊಸದುರ್ಗ ಹಾಗೂ 3)ಹೊಳಲ್ಕೆರ

ಇಲಾಖೆಯು ವಿಶೇಷ ಪ್ರಕಟಣೆಯಾಗಿ ಈ ಕೆಳಕಂಡ ಸಂಪು...

1. A Journey from Madras through the countries of Mysore, Canara and Malabar by Francis Buchanan (three volumes).
2. Glimpses of Karnataka-Multicolored .
3. ಮೈಸೂರು ಗ್ಯಾಸೆಟಿಯರ್ - ಸಿ ಹಯವದನರಾವ್‌ರವರು ಸಂಪಾದಿಸಿರುವ ಐದು ಸಂಪುಟಗಳು - 9 ಪುಸ್ತಕಗಳು.
4. ಇಂಪೀರಿಯಲ್ ಗ್ಯಾಸೆಟಿಯರ್ - ಬೀದರ್, ರಾಯಚೂರು ಮತ್ತು ಗುಲಬರ್ಗಾ.
5. ಕರ್ನಾಟಕ ಕೈಪಿಡಿ- 2012.
6. Jewels of Administration-Multicolored.
7. ಕರ್ನಾಟಕದ ಮಿನುಗು ನೋಟ - ಬಹುವರ್ಣೀಯ.
8. Tipu Sultan - A Crusader for change - ಬಹುವರ್ಣೀಯ (ಕೇಂದ್ರ ಸರ್ಕಾರದ ಅನುದಾನದಡಿ)
9. ಕರ್ನಾಟಕ ಕೈಪಿಡಿ- 2017.
10. ಕರ್ನಾಟಕ ಕೈಪಿಡಿ- 2018 (ಭಾಗ-1, ಭಾಗ-2)(ಪುನರ್ ಮುದ್ರಣ)
11. ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ (ಆಂಗ್ಲ)-ಪರಿಷ್ಕರಣೆ, ಸಂಪಾದನೆ ಮತ್ತು ಮುದ್ರಣ-2015, 2020.

## ಪುನರ್ ಮುದ್ರಣ ಮಾಡಿರುವ ಪುಸ್ತಕಗಳು

1) ಬಿಜಾಪುರ (ಸಂ ಜೇಮ್ಸ್ ಎಂ ಕ್ಯಾಂಬೆಲ್) 1884
2) ದಕ್ಷಿಣ ಕನ್ನಡ (ಸ್ಟರೋಕ್) -1884
3) ಕೆನರಾ (ಸಂ ಜೇಮ್ಸ್ ಕ್ಯಾಂಬೆಲ್)-1884
4) ಧಾರವಾಡ (ಸಂ ಜೇಮ್ಸ್ ಎಂ ಕ್ಯಾಂಬೆಲ್)-1884
5) ಬೆಳಗಾಂ(ಸಂ ಜೇಮ್ಸ್ ಕ್ಯಾಂಬೆಲ್)-1884
6) ಮೈಸೂರು ಭಾಗ-1, ಭಾಗ-2 (ಬಿ.ಎಲ್ ರೈಸ್)-1898, ಮೈಸೂರು ಮತ್ತು ಕೊಡಗು ಭಾಗ-3
7) ಬಳ್ಳಾರಿ (ಸಂ ಕೆಲ್ಸಾಲ್/ಡಬ್ಲೂ ಫ್ರಾನ್ಸಿಸ್) 1872/1904
8) History of Mysore(reprint) by C Hayavadana Roa (3 Volumes 4- Books)-2017.
9) Historical sketches of the south of India in an attempt to trace The history Mysore (reprint)Lieut. Colonel Mark wilks (Part 1&2)-2018.
10) Karnataka through the ages(reprint)-R.R.Diwakar(Volume 1&2) 2018.

2022-23 ನೇ ಸಾಲಿನಲ್ಲಿ ಮುದ್ರಣಗೊಂಡಿರುವ 07 ತಾಲ್ಲೂಕು ಗ್ಯಾಸೆಟಿಯರ್ ಸಂಪುಟಗಳು

1. ದಾವಣಗೆರೆ ಜಿಲ್ಲೆಯ 3 ತಾಲ್ಲೂಕು ಗ್ಯಾಸೆಟಿಯರ್‌ಗಳು:

1)ಹೊನ್ನಾಳಿ 2) ಚನ್ನಗಿರಿ 3)ಜಗಳೂರು

2. ಕೊಪ್ಪಳ ಜಿಲ್ಲೆಯ 4 ತಾಲ್ಲೂಕು ಗ್ಯಾಸೆಟಿಯರ್‌ಗಳು:

1) ಕೊಪ್ಪಳ 2) ಕುಷ್ಟಗಿ 3)ಗಂಗಾವತಿ 4)ಯಲಬುರ್ಗಾ

2022-23ನೇ ಸಾಲಿನ ಮುಂದುವರೆದ ಯೋಜನೆಗಳಾಗಿ ಜಿಲ್ಲಾ ಗ್ಯಾಸೆಟಿಯರ್‌ಗಳ ಸಾಲಿನಲ್ಲಿ 1)ಬೆಂಗಳೂರು, 2)ಚಿಕ್ಕಬಳ್ಳಾಪುರ, 3)ಬೆಂಗಳೂರು ಗ್ರಾಮಾಂತರ, 4)ರಾಮನಗರ ಮತ್ತು 5)ಬಾಗಲಕೋಟೆ ಜಿಲ್ಲಾ ಗ್ಯಾಸೆಟಿಯರ್ ಹಾಗೂ 6)ಕರ್ನಾಟಕ ಕೈಪಿಡಿ ಸಂಪುಟ ಪರಿಷ್ಕರಣೆ (ಕನ್ನಡ ಆವೃತ್ತಿ) ಹೊರ ತರಲು ಯೋಜನೆಗಳನ್ನು ಹಮ್ಮಿಕೊಂಡಿದೆ. ಮತ್ತು ಹೊಸ ಯೋಜನೆಗಳಾಗಿ 1) ಗದಗ 2) ಹಾವೇರಿ 3)ಯಾದಗಿರಿ ಜಿಲ್ಲಾ ಗ್ಯಾಸೆಟಿಯರ್ ಗಳನ್ನು ಹಾಗೂ ಹಾಸನ ಜಿಲ್ಲೆಯ 1) ಆಲೂರು 2) ಅರಕಲಗೂಡು 3 ) ಅರಸೀಕೆರೆ 4) ಬೇಲೂರು 5) ಚನ್ನರಾಯಪಟ್ಟಣ 6) ಹಾಸನ 7) ಹೊಳನರಸೀಪುರ 8) ಸಕಲೇಶಪುರ ತಾಲ್ಲೂಕು ಗ್ಯಾಸೆಟಿಯರ್ ಗಳ ನ್ನು ಪ್ರಕಟಿಸುವ ಯೋಜನೆಯನ್ನು ಮತ್ತು ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿಯನ್ನು ಆಂಗ್ಲ ಭಾಷೆಗೆ ಭಾಷಾಂತರಿಸಲು ಕಾರ್ಯ ಹಮ್ಮಿಕೊಂಡಿದೆ.

ಭಾರತ ದೇಶ ಆಚರಿಸುತ್ತಿರುವ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಆಚರಣೆ ಹಿನ್ನಲೆಯಲ್ಲಿ 'ವಿಶೇಷ ಯೋಜನೆಯಡಿ'-ಉಡುಪಿ ಜಿಲ್ಲೆಯ "ಕಾರ್ಕಳ ತಾಲ್ಲೂಕು" ಗ್ಯಾಸೆಟಿಯರ್ ಪ್ರಕಟಿಸಲು ಸಂಪಾದನಾ ಕಾರ್ಯ ಪೂರ್ಣಗೊಳಿಸಿ ದಿನಾಂಕ:19-01-2023 ನಡೆಯುವ ಸಲಹಾ ಸಮಿತಿ ಮುಂದೆ ಮಂಡಿಸಲು ಕ್ರಮವಹಿಸಲಾಗಿದೆ.

ಇಲಾಖೆಯು ಇದುವರೆಗೆ ಪ್ರಕಟಿಸಿರುವ ಎಲ್ಲಾ ಗ್ಯಾಸೆಟಿಯರ್ ಸಂಪುಟಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ gazetteer.kar.nic.in ರಲ್ಲಿ ಅಳವಡಿಸಿದೆ ಹಾಗೂ ಸರ್ಕಾರಿ ವೆಬ್‌ಸೈಟ್ gazetteer.karnataka.gov.in ನಲ್ಲಿ ಅಳವಡಿಸಲು ಕ್ರಮವಹಿಸಲಾಗಿದೆ.

2022-23 ನೇ ಸಾಲಿಗೆ ಇಲಾಖೆಗೆ ಒಟ್ಟು 166.46 ಲಕ್ಷ ರೂಗಳ (ವೇತನ ಹಾಗೂ ವೇತನೇತರ) ಅನುದಾನ ಹಂಚಿಕೆಯಾಗಿದೆ. ಇದರಲ್ಲಿ 18-1-2023ರ ಅಂತ್ಯಕ್ಕೆ ರೂ 71.03ಲಕ್ಷ (ವೇತನ ವೆಚ್ಚ ರೂ 54.94ಲಕ್ಷ + ವೇತನೇತರ ವೆಚ್ಚ ರೂ 16.09ಲಕ್ಷ ) ವೆಚ್ಚಗೊಂಡಿರುತ್ತದೆ.

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು 2022-23 ನೇ ಸಾಲಿನ ಕ್ರಿಯಾ ಯೋಜನೆಯ ಮುಂದುವರೆದ ಯೋಜನೆಗಳು ಹಾಗೂ ಹೊಸ ಯೋಜನೆಗಳ ಕಾರ್ಯಗಳ ಪ್ರಗತಿಯು ಈ ಕೆಳಕಂಡಂತಿದೆ.

2022-23ನೇ ಸಾಲಿನ ಮುಂದುವರೆದ ಯೋಜನೆಗಳು.

1)ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್ ಗೆ ಸಂಬಂಧಿಸಿದಂತೆ, ಅಧ್ಯಾಯಗಳ ರಚನಾ ಕಾರ್ಯವನ್ನು ಮಾಡಲು ಹೊರಗುತ್ತಿಗೆ ವಿದ್ವಾಂಸರು/ಲೇಖಕರಿಗೆ ನೀಡಿದೆ. 3ನೇ ಸಲಹಾ ಸಮಿತಿ ಸಭೆಗಾಗಿ ಅಧ್ಯಾಯಗಳ ಪರಾಮರ್ಶನ ಕಾರ್ಯ ಜರುಗುತ್ತಿದೆ.

2)ಬಾಗಲಕೋಟೆ ಜಿಲ್ಲಾ ಗ್ಯಾಸೆಟಿಯರ್ ಗೆ ಸಂಬಂಧಿಸಿದಂತೆ, ಅಧ್ಯಾಯಗಳ ರಚನಾ ಕಾರ್ಯವನ್ನು ಮಾಡಲು

ಹೊರಗುತ್ತಿಗೆ ವಿದ್ವಾಂಸರು/ಲೇಖಕರಿಗೆ ನೀಡಿದೆ. 2ನೇ ಸಲಹಾ ಸಮಿತಿ ಸಭೆಯನ್ನು ದಿನಾಂಕ:23-01-2023 ನಡೆಸಲು ಕ್ರಮವಹಿದೆ..

3. ರಾಮನಗರ ಜಿಲ್ಲಾ ಗ್ಯಾಸೆಟಿಯರ್ ಗೆ ಸಂಬಂಧಿಸಿದಂತೆ, ಅಧ್ಯಾಯಗಳ ರಚನಾ ಕಾರ್ಯವನ್ನು ಮಾಡಲು ಹೊರಗುತ್ತಿಗೆ ವಿದ್ವಾಂಸರು/ಲೇಖಕರಿಗೆ ನೀಡಿದೆ.

4. ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್ ಗೆ ಸಂಬಂಧಿಸಿದಂತೆ, ಅಧ್ಯಾಯಗಳ ರಚನಾ ಕಾರ್ಯವನ್ನು ಮಾಡಲು ಹೊರಗುತ್ತಿಗೆ ವಿದ್ವಾಂಸರು/ಲೇಖಕರಿಗೆ ನೀಡಿದೆ.

5.ಚಿಕ್ಕಬಳ್ಳಾಪುರ ಜಿಲ್ಲಾ ಗ್ಯಾಸೆಟಿಯರ್ ಗೆ ಸಂಬಂಧಿಸಿದಂತೆ, ಅಧ್ಯಾಯಗಳ ರಚನಾ ಕಾರ್ಯವನ್ನು ನಿರ್ವಹಿಸಲು ಹೊರಗುತ್ತಿಗೆ ವಿದ್ವಾಂಸರು/ಲೇಖಕರಿಗೆ ನೀಡಿದೆ.

**2022-23 ನೇ ಸಾಲಿನ ಹೊಸ ಯೋಜನೆಗಳು**

ಜಿಲ್ಲಾ ಗ್ಯಾಸೆಟಿಯರ್ ಗಳಿಗೆ ಸಂಬಂಧಿಸಿದಂತೆ 1) ಗದಗ ಜಿಲ್ಲಾ ಗ್ಯಾಸೆಟಿಯರ್, 2)ಹಾವೇರಿ ಜಿಲ್ಲಾ ಗ್ಯಾಸೆಟಿಯರ್ , 3) ಯಾದಗಿರಿ ಜಿಲ್ಲಾ ಗ್ಯಾಸೆಟಿಯರ್ ಗಳ ಅಧ್ಯಾಯಗಳ ರಚನಾ ಕಾರ್ಯವನ್ನು ಮಾಡಲು ಹೊರಗುತ್ತಿಗೆ ಲೇಖಕರು/ವಿದ್ವಾಂಸರಿಗೆ ಅಧ್ಯಾಯಗಳನ್ನು ಹಂಚಿಕೆ ಮಾಡಲಾಗಿದೆ.

ಈ ಮೇಲಿನಂತೆ 2022-23ನೇ ಸಾಲಿನ ಯೋಜನಾ ಕಾರ್ಯಗಳು ಪ್ರಗತಿಯಲ್ಲಿದೆ. ಹಾಗೂ ಈ ಯೋಜನಾ ಕಾರ್ಯಗಳೊಂದಿಗೆ ಇಲಾಖೆಯು ಭಾರತ ದೇಶ ಆಚರಿಸುತ್ತಿರುವ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಆಚರಣೆ ಹಿನ್ನಲೆಯಲ್ಲಿ 'ವಿಶೇಷ ಯೋಜನೆಯಡಿ'-ಉಡುಪಿ ಜಿಲ್ಲೆಯ "ಕಾರ್ಕಳ ತಾಲ್ಲೂಕು" ಗ್ಯಾಸೆಟಿಯರ್ ಪ್ರಕಟಿಸಲು ಸಂಪಾದನಾ ಕಾರ್ಯ ಪೂರ್ಣಗೊಳಿಸಿ ದಿನಾಂಕ:19-01-2023 ನಡೆಯುವ ಸಲಹಾ ಸಮಿತಿ ಮುಂದೆ ಮಂಡಿಸಿ ಮುದ್ರಣಕ್ಕೆ ಸಿದ್ಧಗೊಳಿಸಿದೆ. ಎಂಬುದನ್ನು ಈ ಮೂಲಕ ತಮ್ಮ ಆದ್ಯ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಹಾಸನ ಜಿಲ್ಲೆಯ 1) ಆಲೂರು 2) ಅರಕಲಗೂಡು 3 ) ಅರಸೀಕೆರೆ 4) ಬೇಲೂರು 5) ಚನ್ನರಾಯಪಟ್ಟಣ 6) ಹಾಸನ 7) ಹೊಳೆನರಸೀಪುರ 8) ಸಕಲೇಶಪುರ ತಾಲ್ಲೂಕು ಗ್ಯಾಸೆಟಿಯರ್ ಗಳ ನ್ನು ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ತಮ್ಮ ವಿಶ್ವಾಸಿ

ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ
ಬೆಂಗಳೂರು